# ಪ್ರಥಮ ಬಿ.ಎ. ಪದವಿ ಪರೀಕ್ಷೆ, ಆಗಸ್ಟ್/ಸಪ್ಟೆಂಬರ್ 2010

## ಅಂಚೆ ಮತ್ತು ತೆರಪಿನ ಶಿಕ್ಷಣ

(ಹೊಸಬರಿಗೆ)

## ಬಸವತತ್ವ ಪ್ರದೀಪಿಕೆ

## ಪತ್ರಿಕೆ–1 ಬಸವ ತತ್ವ

ಸಮಯ: *3 ಗಂಟೆಗಳು]* ಅಂಕಗಳು: *80*

**I. ಯಾವುದಾದರೂ ಎರಡು ವಚನಗಳನ್ನು ವಿಶ್ಲೇಷಿಸಿ.** 2 X 5 = 10 ಅಂಕಗಳು

ಅ) ದೇವಲೋಕ ಮರ್ತ್ಯಲೋಕವೆಂಬುದು ಬೇರುಂಟೆ?
ಈ ಲೋಕದೊಳಗೆ ಮತ್ತೆ ಅನಂತಲೋಕ
ಶಿವಲೋಕ ಶಿವಾಚಾರವಯ್ಯ
ಭಕ್ತನಿರ್ದರಾವೇ ದೇವಲೋಕ
ಭಕ್ತನಂಗಳವೇ ವಾರಣಾಸಿ
ಕಾಯಕವೇ ಕೈಲಾಸ
ಇದು ಸತ್ಯ ಕೂಡಲ ಸಂಗಮ ದೇವ.

ಆ) ಕೆರೆ ದೇಗುಲಂಗಳೆಲ್ಲವು
ಹಿಂದಣ ಅಡಿವೆಜ್ಜಗೂಳಗು
ಕರ್ಮಕಾಂಡ ಯೋಗಂಗಳೆಲ್ಲವು
ಭವದ ತೆಕ್ಕೆಗೆ ಒಳಗು
ಹಿಂದಣ ಮುಂದಣ ಸಂದವಳಿದು
ಗುಹೇಶ್ವರ ಲಿಂಗದಲ್ಲಿ ಸಂಧಿಸಬೇಕು ಸಿದ್ಧರಾಮಯ್ಯ.

ಇ) ದೇಹವೇ ದೇವಾಲಯವಾಗಿದ್ದ ಮೇಲೆ
ಮತ್ತೆ ಬೇರೆ ದೇವಾಲಯವೇಕಯ್ಯ
ಪ್ರಾಣವೇ ಲಿಂಗವಾದ ಬಳಿಕ
ಮತ್ತೇ ಬೇರೆ ಲಿಂಗವೇಕಯ್ಯ
ಎರಡಕ್ಕೆ ಹೇಳಲಿಲ್ಲ
ಗುಹೇಶ್ವರಾ, ನೀ ಕಲ್ಲಾದಡೆ ನಾನೇನಪ್ಪೆನು.

**II. ಯಾವುದಾದರೂ ಮೂರಕ್ಕೆ ಟಿಪ್ಪಣಿ ಬರೆಯಿರಿ.** 3 X 10 = 30 ಅಂಕಗಳು

ಅ) ನಿಜವಾದ ಕರ್ಮಸಿದ್ಧಾಂತ ಯಾವುದು? ಬಸವಣ್ಣನವರ ವಿಚಾರದ ಹಿನ್ನಲೆಯಲ್ಲಿ ಚರ್ಚಿಸಿ.

ಆ) ಮೂಢನಂಬಿಕೆಗಳನ್ನು ನಿವಾರಿಸುವಲ್ಲಿ ಶರಣರ ಪಾತ್ರದ ಬಗ್ಗೆ ನಿಮ್ಮ ಅಭಿಪ್ರಾಯವನ್ನು ವಿವರಿಸಿ.

ಇ) ಪುನರ್ಜನ್ಮದ ಬಗ್ಗೆ ಅಲ್ಲಮಪ್ರಭುವಿನ ಅಭಿಪ್ರಾಯವೇನು? ವೀರಶೈವಧರ್ಮದ ಹಿನ್ನಲೆಯಲ್ಲಿ ಚರ್ಚಿಸಿ.

*Contd... 2*

## ನಿಜಾಚಾರಣೆ

**III. ಯಾವುದಾದರೂ ಎರಡಕ್ಕೆ ಟಿಪ್ಪಣಿ ಬರೆಯಿರಿ.** 2 X 5 = 10 ಅಂಕಗಳು

ಅ) ವೀರಶೈವ ಧರ್ಮದ ಹಿನ್ನಲೆಯಲ್ಲಿ ನಾಮಕರಣ ಕಾರ್ಯಕ್ರಮದ ಸ್ವರೂಪ.

ಆ) ಕಲ್ಯಾಣ ಮಹೋತ್ಸವ

ಇ) ಸೀಮಂತ ಕಾರ್ಯ

## ವಿಶ್ವಧರ್ಮಗಳು ಮತ್ತು ಧರ್ಮಗಳ ಸಮನ್ವಯ

**IV. ಯಾವುದಾದರೂ ಮೂರು ಪ್ರಶ್ನೆಗಳಿಗೆ ಉತ್ತರಿಸಿ.** 3 X 10 = 30 ಅಂಕಗಳು

ಅ) ವೇದಗಳ ಸಮಾಜಮುಖಿ ಸಂದೇಶಗಳಾವುವು? ವಿವರಿಸಿ.

ಆ) ಉಪನಿಷತ್‌ಗಳು ಹೇಗೆ ವಿಶ್ವಧರ್ಮಗಳ ಸಾರವನ್ನು ಹೇಳುತ್ತದೆ? ವಿವರಿಸಿ.

ಇ) ಬೌದ್ಧ ಧರ್ಮದ ನೀತಿ ಸಿದ್ಧಾಂತವನ್ನು ವಿವರಿಸಿ.

ಈ) ಕ್ರೈಸ್ತ ಧರ್ಮದ ಪ್ರಾಯಶ್ಚಿತ್ತ ಮತ್ತು ಇತರ ಉಪದೇಶಗಳನ್ನು ಬರೆಯಿರಿ.

** * * * **